# 24. ಕಡಲೆ

ಬೇಳೆಕಾಳು ಬೆಳೆಗಳಲ್ಲಿ ಕಡಲೆ ಒಂದು ಮುಖ್ಯವಾದ ಬೆಳೆ. ಇದನ್ನು ಹೆಚ್ಚಾಗಿ ಕಪ್ಪು ಹಾಗೂ ಕೆಂಪು ಮಣ್ಣಿನ ಪ್ರದೇಶಗಳಲ್ಲಿ ಹಿಂಗಾರಿನಲ್ಲಿ ಬೆಳೆಯಲಾಗುತ್ತದೆ.

**ತಳಿಗಳು ಮತ್ತು ವಿಶೇಷ ಗುಣಗಳು**

| ತಳಿಗಳು | ಬಿತ್ತನೆ ಕಾಲ | ಕಾಲಾವಧಿ (ದಿನಗಳು) | ಇಳುವರಿ (ಕ್ವಿಂ/ಎ) | | ವಿಶೇಷ ಗುಣಗಳು |
|---|---|---|---|---|---|
| | | | ಮಳೆಯಾಶ್ರಿತ | ನೀರಾವರಿ | |
| ಅಣ್ಣಿಗೇರಿ 1 | ಹಿಂಗಾರು (ಅಕ್ಟೋಬರ್ 2ನೇ ವಾರದಿಂದ ನವೆಂಬರ್ 2ನೇ ವಾರದವರೆಗೆ) | 95–100 | 3–8 | 6–8 | ದೇಸಿ ತಳಿ, ಬರ ನಿರೋಧಕ, ಮಧ್ಯಮ ಗಾತ್ರದ ಬೀಜ ಹೊಂದಿದೆ. |
| ಜೆ.ಜಿ 11 | | | | | ದೇಸಿ ತಳಿ, ಅಲ್ಪಾವಧಿ, ಸೊರಗು ರೋಗಕ್ಕೆ ಸಹಿಷ್ಣುತೆ ಗುಣ, ತಿಳಿ ಕಂದು ಬಣ್ಣದ ದಪ್ಪ ಗಾತ್ರದ ಬೀಜ ಹೊಂದಿದೆ. |
| ವಿಶಾಲ್ | | 100–110 | | | ದೇಶಿ ತಳಿ, ದಪ್ಪನೆ ಬೀಜ ಹೊಂದಿದೆ. |
| ಕೆ.ಎ.ಕೆ 2 | | 80–85 | | | ಕಾಬೂಲಿ ತಳಿ, ಬಿಳಿ ಬಣ್ಣದ ದಪ್ಪ ಗಾತ್ರದ ಬೀಜ ಹೊಂದಿದೆ. |

**ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು (ಎಕರೆಗೆ)**

| ಸಾಮಗ್ರಿಗಳು | ಪ್ರಮಾಣ | |
|---|---|---|
| ಬೀಜ (ಕಿ.ಗ್ರಾಂ) | 25 | |
| ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ (ಟನ್) | 3 | |
| **ಜೈವಿಕ ಗೊಬ್ಬರಗಳು (ಗ್ರಾಂ)** | | |
| ರೈಜೋಬಿಯಂ | 200 | |
| ರಂಜಕ ಕರಗಿಸುವ ಜೀವಾಣು | 200 | |
| **ರಸಾಯನಿಕ ಗೊಬ್ಬರಗಳು (ಕಿ.ಗ್ರಾಂ)** | ನೀರಾವರಿ | ಖುಷ್ಕಿ |
| ಸಾರಜನಕ | 10 | 5 |
| ರಂಜಕ | 20 | 10 |
| ಪೊಟ್ಯಾಷ್ | 20 | 10 |

**ಬಿತ್ತನೆ:** ಭೂಮಿಯನ್ನು ಉಳುಮೆಮಾಡಿ ಹೆಂಟೆ ಹೊಡೆದು ಸಿದ್ಧಪಡಿಸಿ. 12 ಅಂಗುಲ ಅಂತರದ ಸಾಲುಗಳಲ್ಲಿ ರಸಾಯನಿಕ ಗೊಬ್ಬರಗಳನ್ನು ಬೀಜದಿಂದ 3 ಅಂಗುಲ ದೂರದಲ್ಲಿ ಬೀಳುವಂತೆ ಕೊಡುವುದು. ಬಿತ್ತನೆಗೆ ಮೊದಲು ಎಕರೆಗೆ ಬೇಕಾಗುವ ಬೀಜಕ್ಕೆ ರೈಜೋಬಿಯಂ ಹಾಗೂ ರಂಜಕ ಕರಗಿಸುವ ಜೀವಾಣುಗಳಿಂದ ಲೇಪಿಸಿ 4 ಅಂಗುಲ ಅಂತರದಲ್ಲಿ ಬಿತ್ತನೆ ಮಾಡುವುದು. ಮಣ್ಣು ಮತ್ತು ಹವಾಗುಣವನ್ನು ಅನುಸರಿಸಿ ಎರಡು ಸಾರಿ ಕಳೆ ತೆಗೆಯುವುದು. ಶೇ.2ರ ಯೂರಿಯಾ ಸಿಂಪರಣೆಯನ್ನು ಹೂವಾಡುವ ಹಂತದಲ್ಲಿ ಮತ್ತು 10 ದಿವಸದ ನಂತರ ಸಿಂಪರಣೆ ಮಾಡುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು.

**ಮುಖ್ಯವಾದ ಕಡಿಮೆ ಖರ್ಚಿನ ಬೇಸಾಯ ಕ್ರಮಗಳು**

- ಶಿಫಾರಸ್ಸು ಮಾಡಿದ ತಳಿಗಳನ್ನೇ ಬಳಸುವುದು. ಬಿತ್ತನೆಗೆ ಮೂರು ವಾರಗಳ ಮೊದಲು ಕೊಟ್ಟಿಗೆ ಗೊಬ್ಬರ / ಕಾಂಪೋಸ್ಟ್ ಅನ್ನು ಭೂಮಿಗೆ ಸೇರಿಸುವುದು.

## ಸಸ್ಯ ಸಂರಕ್ಷಣೆ: ಪ್ರಮುಖ ಕೀಟಗಳು, ರೋಗಗಳು ಹಾಗೂ ನಿರ್ವಹಣೆ

**ಕೀಟಗಳು**

| ಮುಖ್ಯ ಕೀಟ ಪೀಡೆಗಳು | ಹಾನಿಯ ಲಕ್ಷಣಗಳು | ಪರಿಣಾಮಕಾರಿ ಕೀಟನಾಶಕಗಳು | ಪ್ರಮಾಣ ಪ್ರತಿ ಲೀಟರ್ ನೀರಿಗೆ | ಎಕರೆಗೆ ಪ್ರತಿ ಸಿಂಪರಣೆಗೆ | ಬಳಸಬೇಕಾದ ಹಂತ ಮತ್ತು ವಿಧಾನ |
|---|---|---|---|---|---|
| **ಕಡಲೆ ಹುಳು** | ಕಾಯಿಗಳ ಮೇಲೆ ರಂಧ್ರವಿರುತ್ತದೆ. | ಕ್ಲೋರ್ಯಾನ್‌ಟ್ರಾನಿಲಿಪ್ರೋಲ್ 18.5 ಎಸ್.ಸಿ ಅಥವಾ<br>ಎಮಾಮೆಕ್ಟಿನ್ ಬೆನ್‌ಜೋಯೇಟ್ 5 ಎಸ್.ಜಿ ಅಥವಾ<br>ಲ್ಯಾಂಬ್ಡಾಸೈಹ್ಯಾಲೋಥ್ರಿನ್ 5 ಇ.ಸಿ ಅಥವಾ<br>ಕ್ವಿನಾಲ್‌ಫಾಸ್ 25 ಇ.ಸಿ ಅಥವಾ<br>ಇಂಡಾಕ್ಸಕಾರ್ಬ 14.5 ಎಸ್.ಸಿ ಅಥವಾ<br>ಮಾಲಾಥಿಯಾನ್ ಶೇ. 5ರ ಧೂಳು | 0.25 ಮಿ.ಲೀ<br>0.5 ಗ್ರಾಂ<br>1.25 ಮಿ.ಲೀ<br>2.0 ಮಿ.ಲೀ<br>0.50 ಮಿ.ಲೀ | 50–75 ಮಿ.ಲೀ<br>100–150 ಗ್ರಾಂ<br>250–375 ಮಿ.ಲೀ<br>400–600 ಮಿ.ಲೀ<br>100–150 ಮಿ.ಲೀ<br>8 ಕಿ.ಗ್ರಾಂ | ಹುಳುಗಳ ಬಾಧೆ ಕಂಡುಬಂದಾಗ 200 ರಿಂದ 300 ಲೀಟರ್ ದ್ರಾವಣ ಸಿಂಪಡಿಸುವುದು. ಹುಳುವಿನ ಬಾಧೆ ಇನ್ನೂ ಕಂಡುಬಂದಲ್ಲಿ 10 ದಿನಗಳ ನಂತರ ಮತ್ತೆ ಸಿಂಪಡಿಸುವುದು. ಸಿಂಪರಣೆಗೆ ಬದಲಾಗಿ ಮಾಲಾಥಿಯಾನ್ ಪುಡಿಯನ್ನು ಬೆಳಗಿನ ಹೊತ್ತಿನಲ್ಲಿ ಧೂಳೀಕರಿಸುವುದು |
| | | ಹೆಲಿಕೋವರ್ಪ ನಂಜುರೋಗಾಣು ದ್ರಾವಣ (ಹೆಚ್.ಎ.ಎನ್.ಪಿ.ವಿ) | ನಂಜಾಣು ಕಣಗಳು/(ಎಲ್.ಇ) | 100 ಎಲ್.ಇ | 100 ಎಲ್.ಇ ಹೆಚ್.ಎ.ಎನ್.ಪಿ.ವಿ. ನಂಜಾಣುವನ್ನು 200 ಲೀ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು. ಹೆಚ್.ಎ.ಎನ್.ಪಿ.ವಿ. ಸಿಂಪಡಿಸುವಾಗ ಶೇ. 0.1 ಟೀಪಾಲ್ (ಪ್ರತಿ ಲೀ 1 ಗ್ರಾಂ) ಮತ್ತು ಶೇ. 0.5 ಬೆಲ್ಲದ (ಪ್ರತಿ ಲೀ 5 ಗ್ರಾಂ) ಜೊತೆ ಬೆರೆಸಿ ಸಿಂಪಡಿಸುವುದು.ಸಮಗ್ರ ನಿರ್ವಹಣೆಗೆ ಪ್ರತಿ 6 ಸಾಲು ಕಡಲೆಯಲ್ಲಿ ಒಂದು ಸಾಲು ಕೊತ್ತಂಬರಿ ಬೆಳೆಯುವುದು. ಎಕರೆಗೆ 2 ಮೋಹಕ ಬಲೆಗಳನ್ನು ಬಳಸುವುದು. |

**ರೋಗಗಳು**

| *ರೋಗಗಳು* | *ಮುಖ್ಯವಾದ ಚಿಹ್ನೆಗಳು* | *ರೋಗನಾಶಕಗಳು* | *1 ಲೀ ನೀರಿಗೆ ಬೇಕಾಗುವ ಪ್ರಮಾಣ* | *ಎಕರೆಗೆ ಬೇಕಾಗುವ ಪ್ರಮಾಣ* | *ಉಪಯೋಗಿಸಬೇಕಾದ ಕಾಲ ಮತ್ತು ವಿಧಾನ* |
|---|---|---|---|---|---|
| **ಸೊರಗು ರೋಗ** | ಗಿಡಗಳ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ, ಗಿಡಗಳು ಹೆಚ್ಚಾಗಿ ಹೂವಿನ ಹಂತದಿಂದ ಕಾಳು ಕಟ್ಟುವವರೆಗೆ ಸಾಯುತ್ತಿರುತ್ತವೆ. | ಕಾರ್ಬೆಂಡಜಿಂ 50 ಡಬ್ಲ್ಯೂ.ಪಿ | 2 ಗ್ರಾಂ | 50 ಗ್ರಾಂ | ಬೀಜೋಪಚಾರ ಮಾಡುವುದು |
| | | *ಟ್ರೈಕೋಡರ್ಮ ವಿರಿಡೆ* | 5 ಗ್ರಾಂ | 125 ಗ್ರಾಂ | ಬೀಜೋಪಚಾರ ಮಾಡುವುದು |

# ಕಡಲೆ



ಕಡಲೆಯಲ್ಲಿ ಹನಿ ನೀರಾವರಿ



ಜೋಳದ ನಂತರ ಕಡಲೆ

# ಹುರುಳಿ



ತಳಿ : ಪಿ.ಎಚ್.ಜಿ.–9



ಅಲಸಂದೆಯಲ್ಲಿ ಅಂತರ ಬೆಳೆಯಾಗಿ



ಮುಸುಕಿನ ಜೋಳದಲ್ಲಿ ಅಂತರ ಬೆಳೆಯಾಗಿ